Regd. No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 80] ಗುರುವಾರ 21—11—46 [ಬಿಡಿ ಪ್ರತಿ 3 ಪೈ

ಸಂಯುಕ್ತ ಜವಾಂಗಗಳ

ವಿದ್ಯಾ. ರಸಾಯನಶಾಸ್ತ್ರ ಮತ್ತು ಕಲಾ ಸಂಸ್ಥೆಯಲ್ಲಿ
ರಷ್ಯಾ ಭಾಗವಹಿಸಲು ನಿರಾಕರಿಸಿದೆ
ಪ್ಯಾರಿಸ್ಸಿನಲ್ಲಿ ಈ ಸಂಸ್ಥೆ ಮೊನ್ನೆ ಪ್ರಾರಂಭವಾಯಿತು.

ವಾರ್ತೆಗಳು

ಇನ್ನು ಮುಂಬೆ ರಾವ್‌ಸಾಹೇಬ್ ಖಾನ್‌ಬಹದ್ದೂರ್ ಮೊದಲಾದ ಎಲ್ಲಾ ಬಿರುದುಗಳನ್ನೂ ಕೊಡಕೂಡದೆಂದು ವೈಸ್ರಾಯರು ಚಕ್ರವರ್ತಿಗಳಿಗೆ ಸೂಚಿಸಬೇಕೆಂದು ದೆಹಲಿಯ ಶಾಸನಸಭೆಯಲ್ಲಿ ನಿರ್ಣಯಿಸಲ್ಪಟ್ಟಿದೆ.

ಂ ಂ

ಕಲ್ಕತ್ತಾದ ಹೌರಾ ಸ್ಟೇಷನ್ನಿನಲ್ಲಿ 8 ಕತ್ತಿಗಳು ಪೆಟ್ಟಿಗೆಗಳನ್ನು ರೈಲ್ವೇ ಪಾರ್ಸಲ್ಲುಗಳ ವಂಚಕ ತರಿಸಿದ ಒಬ್ಬನನ್ನು ಪೋಲೀಸು ಅಧಿಕಾರಿಗಳು ಅನುಮಾನದ ಮೇಲೆ ದಸ್ತಗಿರಿ ಮಾಡಿ ವಿಚಾರಣೆ ನಡೆಸುತ್ತಿರುವರು.

ಂ ಂ

ನಡೆಯಲಿರುವ ರಾಜ್ಯಾಂಗ ಪರಿಷತ್ತಿನಲ್ಲಿ ಸಿಕ್ಕರು ಪ್ರಧಾನ ವಿಷಯಗಳಲ್ಲಿ ಕಾಂಗ್ರೆಸ್ಸಿನೊಂದಿಗೆ ಏಕೀಭವಿಸುವ ದಾಗಿಯೂ, ಸಿಕ್ ಜಾತಿಗೆ ಸಂಬಂಧಿಸಿದ ವಿಷಯಗಳಲ್ಲಿ ಸ್ವತಂತ್ರವಾಗಿ ವರ್ತಿಸುವುದಾಗಿ ನಿರ್ಣಯಿಸಲಿರುವರು.

ಂ ಂ

ಜಿರಾಲಾ, ಚಾಪಾಟ್ಲಾ ತಾಲ್ಲೂಕುಗಳಲ್ಲಿ ಅತಿವೃಷ್ಟಿಯಿಂದ ಪ್ರವಾಹಗಳು ಬಂದು ಬೆಳೆಗಳಿಗೂ ಮನೆಗಳಿಗೂ ವಿಶೇಷ ನಷ್ಟವುಂಟಾಗಿದೆ.

ಂ ಂ

ಪೂರ್ವ ಬಂಗಾಳಾದ ಚಾಂದಪುರ ಮೊದಲಾದ ಪ್ರಾಂತ್ಯಗಳಲ್ಲಿ ಗೂಂಡಾಗಳ ದಾರುಣ ಹತ್ಯಾಕಾಂಡವನ್ನು ನೋಡುತ್ತಿರುವರು. ಗಾಂಧೀಯವರ ಉಪದೇಶ ಫಲಿಸುತ್ತಿರುವಂತೆ ಕಾಣಬರುವುದಿಲ್ಲ. ಜೀನಾರವರು ಮಾತನಾಡುವುದಿಲ್ಲ. ವಾಲಂಟೀರರೂ, ಅಲ್ಪಸಂಖ್ಯಾ ಜಾತಿಗಳವರೂ ಹಿಂಸಿಸಲ್ಪಡುತ್ತಿರುವರು, ಭಯಭೀತರಾಗಿ ಹತ ಶೇಷರಾದವರು ಅಸ್ಸಾಂ ಮೊದಲಾದ ವ್ಯದೇಶಗಳಿಗೆ ಪಲಾಯನ ಮಾಡುತ್ತಿರುವರು.

ಸೇ- ಂ
ಕಾರವು [illegible]
ಸಾಲಾ ಕೊಡುವುದು ಹಣಕಾಸಿನ
ಸ್ಥಾಯಿ ಸಮಿತಿಯಲ್ಲಿ ತೀರ್ಮಾನ
ವಾಗಿದೆ.

ಭಾರತಕ್ಕೆ ಸ್ಥಾನ ಸಿಗಲಿಲ್ಲ

ಫ್ಲಷಿಂಗ್ [ನ್ಯೂಯಾರ್ಕ್ ನ 19 — ವಿಶ್ವಸಂಸ್ಥೆಯ ರಕ್ಷಣಾ ಸಮಿತಿ ಸದಸ್ಯತ್ವಕ್ಕೆ ನಡೆದ ಚುನಾವಣೆಯಲ್ಲಿ ಭಾರತಕ್ಕೆ 13 ಓಟುಗಳು ಬಂದು ಸ್ಥಾನ ದೊರೆಯಲಿಲ್ಲ. ರಷ್ಯಾವು ಭಾರತಕ್ಕೆ ಬೆಂಬಲವೀಯದಿದ್ದುದೇ ಭಾರತದ ಸೋಲಿಗೆ ಕಾರಣವೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಬರ್ಡ್ವಾನ್ ರಾಜರ ಔದಾರ್ಯ

ಬರ್ಡ್ವಾನ್ ನ 20 — ಹಿಂದೂ ಮಹಾಸಭೆಯ ವಿನಂತಿಯನ್ನು ಅಂಗೀಕರಿಸಿ ಬರ್ಡವಾನ್ ಮಹಾರಾಜರು ಪೂರ್ವ ಬಂಗಾಳಾ ಗಲಭೆಗೆ ತುತ್ತಾದ ನಿರಾಶ್ರಿತರು ತಮ್ಮ ರಾಜ್ಯಕ್ಕೆ ನೆಲಸಲು ಬಂದಲ್ಲಿ ಅವರಿಗೆ ಉಚಿತವಾಗಿ ಸ್ಥಳ ಕೊಡಲು ಒಪ್ಪಿದ್ದಾರೆ.

ರೈಲು ನಿಲ್ಲಿಸಲಾಗಿವೆ

ಜರೂಸೆಲಂ ನ 17 — ಪ್ಯಾಲಿಸ್ಟೈನಿನಲ್ಲಿ ಭಯೋತ್ಪಾತಕರ ಗಲಾಟೆಗೆ ಕೆಲಸಗಾರರು ಹೆದರಿರುವುದರಿಂದ ಇಲ್ಲಿಯ ರೈಲುಗಳನ್ನು ನಿಲ್ಲಿಸಲಾಗಿದೆ.

ತೂಕ ಎತ್ತುವ ಪಂಥ

ಕೊಲಂಬೊ ನ 17 — ಭಾರತಕ್ಕೂ ಸಿಲೋನಿಗೂ ತೂಕ ಎತ್ತುವ ಪಂಥವು ಇಲ್ಲಿ ಡಿಸೆಂಬರ್ 6 ಕ್ಕೆ ನಡೆಯುವುದು.

ಆಟಂಬಾಂಬಿಗೇ

ಆವರ್ ಪೂಲ್ ನ 19 — ಬೆಲ್ಜಿಯಂ ಹಡಗಿನೊಂದರಲ್ಲಿ ಬ್ರಿಟನ್ನಿಗೆ ಆಟಂಬಾಂಬು ತಯಾರಿಸಲು ಮುಖ್ಯವಾದ ಉರೇನಿಯಂ 869 ಟನ್ ಬಂದಿದೆ.

ಹಡಗುಗಳ ಸಾವುನೋವು

ಬೊಂಬಾಯಿ ನ 19 — ಅರೇಬಿಯಾ ಸಮುದ್ರದ ಕಡೆಯಿಂದ ಬೀಸಿದ ತೀವ್ರಗಾಳಿಯಿಂದ ಅನೇಕ ಹಡಗು ಮತ್ತು ದೋಣಿಗಳಿಗೆ ಅಪಾಯ ಒದಗಿರುವುದೆಂದು ಶಂಕಿಸಲಾಗಿದೆ.

ಪಂಚಾಯಿತಿಗೆ ಒಪ್ಪಿಸಲಾಗುತ್ತೆ

ಕಲ್ಕತ್ತಾ ನ 18 — ಬರ್ನ್ ಕಂಪೆನಿಯ [illegible] ಕಲ್ಲಿದ್ದಲು ಮತ್ತು ಉಕ್ಕು ಕೆಲಸಗಾರರು 3 ತಿಂಗಳಿಂದ ನಡೆಸುತ್ತಿರುವ ಮುಷ್ಕರವು ಸರಕಾರದವರಿಂದ ಪಂಚಾಯಿತಿ ತೀರ್ಮಾನಕ್ಕೆ ಒಪ್ಪಿಸಲಾಗುವುದು.

ವಿವಾಹ ವಿಚ್ಛೇದನ

ಅಮೇರಿಕದ ಪ್ರಸಿದ್ಧ ಹಾಸ್ಯ ನಟ ಸಿನೆಮಾ ತಾರೆಯಾಗಿರುವ ಚಾರ್ಲಿಚೆಪ್ಲಿನನು ಮಾಡಿಕೊಂಡ ವಿವಾಹ ವಿಚ್ಛೇದಗಳಿಗಾಗಿ ೩೩ ಲಕ್ಷ ರೂಪಾಯಿ ಖರ್ಚಮಾಡಬೇಕಾಗಿಯಿತು. ಇನ್ನೊಬ್ಬ ಸಿನೆಮಾ ತಾರೆ ಜೋನ್ ಗಿಲ್ಬರ್ಟನು ವಿವಾಹ ವಿಚ್ಛೇದದಲ್ಲಿ ಹೆಂಡತಿಗೆ ನಾಲ್ಕು ಲಕ್ಷವನ್ನು ಕೊಡಬೇಕಾಯಿತಲ್ಲದೆ ಅವಳಲ್ಲಿ ಅವನಿಗಾದ ಮಗುವಿಗೆ ವರ್ಷಕ್ಕೆ ರೂಪಾಯಿ 7 ಸಾವಿರದಂತೆ ತೆರಬೇಕಾಯಿತು. ವಿಲಿಯಮ್ ಹಾರ್ಟ್ ಎಂಬಾತನು ತನ್ನ ಹಳೆ ಹೆಂಡತಿಗೆ ಏಳು ಲಕ್ಷ ರೂಪಾಯಿ ಕೊಡಬೇಕಾಯಿತು. ಮಂಜು ಎಂಬಾತನು ತನ್ನ ಹಿಂದಿನ ಹೆಂಡತಿಗೆ ರೂಪಾಯಿ 70000 ನಗದಿಯಲ್ಲಿಯೂ ರೂಪಾಯಿ ೨ ಲಕ್ಷ ಬೆಲೆಯ ಒಂದು ಮನೆಯನ್ನೂ, ವಾರಕ್ಕೆ ರೂ 1750 ನ್ನೂ ಕೊಡಬೇಕಾಯಿತು. ಜೋನ್ ಹಾರ್ಲೋ ಎಂಬ ನಟಿಗೆ ತನ್ನ ಹಳೆ ಗಂಡನಿಂದ ೫] ಲಕ್ಷ ರೂಪಾಯಿ ದೊರಕಿತು.

ಅಮೇರಿಕದ ಸಿನೆಮಾ ನಟಿಗಳ ನೆಲೆಯಾಗಿರುವ ಹೊಲ್ಲಿವುಡ್‌ನಲ್ಲಿ ನಡೆಯುವ ಪ್ರಸಿದ್ಧ ವಿವಾಹ ವಿಚ್ಛೇದಗಳಲ್ಲಿ ಹೆಂಡತಿಗೆ ವರ್ಷಕ್ಕೆ ಕನಿಷ್ಟ ಪಕ್ಷ ೭೦೦೦ ರೂಪಾಯಿ ಕೊಡಬೇಕಾಗುತ್ತದೆ. ವಿಚ್ಛೇದ ಗಂಡಂದಿರ ಹೆಂಡತಿಯ ತಿಂಗಳ ಖರ್ಚು ಈ ಕೆಳಗಿನಂತೆ ಇದೆ.

ಬಾಡಿಗೆ ರೂ ೭೦೦ ಹಸೂರಿರೂ. ೧೫೦ ಅಡಿಗೆ ಮತ್ತು ಕೆಲಸದವಳಿಗೆ ರೂ. ೩೫೧ ಆಹಾರಕ್ಕೆ ರೂ ೧೦೦ ವಸ್ತ್ರಕ್ಕೆ ರೂ. ೨೧೦ ಆತಿಥ್ಯಕ್ಕೆ ರೂ. ೪೦೧ ಕಾರಿನ ಡ್ರೈವರ ರೂ ೬೦೦ ಔಷಧಕ್ಕೆ ರೂ ೧೦೦ ತಂತಿ ಟಪ್ಪಾಲು ರೂ ೧೫೦ ಸೌಂದರ್ಯಕ್ಕೆ ರೂ ೭೫ ವಸ್ತ್ರ ಮಡಿಗೆ ಕೊಡಲಕ್ಕೆ ರೂ. ೭೫ ಜುಪ್ಪಾ ರೂ ೫೦೦ ಹೀಗೆ ವರ್ಷಕ್ಕೆ ರೂ ೭೦೦೦೦ ಕೊಟ್ಟಲ್ಲಿಗಂಡ ಕಳೆದು ಕೊಂಡ ಬಡ ಹುಡುಗಿಗೆ ಕೈಯಲ್ಲಿ ಕಾಸು ಉಳಿಯುವುದು ಕಷ್ಟ.

ಹೊಸ ವಿಮಾನ

36 ಟನ್ನುಗಳ ಭಾರವನ್ನು ಹೊರಬಲ್ಲ 10 ಸಾವಿರ ಮೈಲು ದೂರ ಹೋಗಬಲ್ಲ ಶಕ್ತಿಯುಳ್ಳ ಹೊಸ ವಿಮಾನವು ಕಂಡು ಹಿಡಿಯಲ್ಪಟ್ಟಿದೆ. ಪೆಟ್ರೋಲು ತೆಗೆದು ಕೊಳ್ಳಲು ದಾರಿಯಲ್ಲಿ ಎಲ್ಲಿಯೂ ನಿಲ್ಲಬೇಕಾಗಿರುವುದಿಲ್ಲ. ಪುನಃ ಯುದ್ಧವಾದಲ್ಲಿ ಆಟಂ ಬಾಂಬುಗಳನ್ನು ಎಷ್ಟು ದೂರಕ್ಕಾದರೂ ಹೋಗಿ ಎಸೆದು ಬರಬಲ್ಲದೆಂದು ಹೇಳಲಾಗಿದೆ.

ಮತದ ಹುಚ್ಚು

ಮತದ ಹುಚ್ಚಿನಿಂದ ಗಲಾಟೆಮಾನ್ನು ಮಾಡುವಂಥವರನ್ನು ಕ್ರಮಪದ್ಧತಿಯಲ್ಲಿಡಲು ಕಾರ್ಯಕ್ರಮ ಜಡೆಸಲ್ಪಡುತ್ತಿದೆ ಎಂದು ಶ್ರೀ ಪಟೇಲರು ಪ್ರಕಟಣೆ ಮಾಡಿರುವರು.

ಮೈಸೂರು ಹಿಂದೂಮಹಾಸಭಾ

ಬೆಂಗಳೂರು ನ 20— ಮೈಸೂರು ಹಿಂದೂಮಹಾಸಭಾ ಕಾರ್ಯಕಾರಿ ಸಮಿತಿ [illegible] 26—11—46 ನೇ ಮಂಗಳವಾರ ಚಾಮರಾಜನಗರದಲ್ಲಿ ಜರಗುತ್ತದೆ. ಅಖಿಲ ಭಾರತ ಹಿಂದೂ ಮಹಾಸಭೆಯ ಕಾರ್ಯಕಾರಿ ಸಮಿತಿಯ ಸದಸ್ಯರೂ ಮತ್ತು ಮದರಾಸು ಪ್ರಾಂತೀಯ ಹಿಂದೂಮಹಾಸಭಾ ಜನರಲ್ ಸೆಕ್ರೆಟರಿಗಳೂ ಆದ ಶ್ರೀ ಕೆ. ಶಿವನಾಂಡಿ ತೆವರರು ಆ ದಿವಸ ಬರಲು ದಯೆಯಿಟ್ಟು ಒಪ್ಪಿರುತ್ತಾರೆ. ಸಾಯಂಕಾಲ ವಿಸರ್ಜಿಸಿರುವ ಬಹಿರಂಗ ಸಭೆಯಲ್ಲಿ ತ್ಯಾಗಶೀಲರಾದ ಭೂಪಾಳಂರವರು, ಜ್ವಾಲೇಂದ್ರ ಪ್ರಭೃತಿ [illegible] ನಗರ ನಾಯಕರು ಭಾಷಣ ಮಾಡುವರು. [illegible] ಚಾಮರಾಜನಗರದ ಹಿಂ || ಮ || ಸಭಾ ನಗರ ಸಮಿತಿಯವರು ಎಲ್ಲಾ ವ್ಯವಸ್ಥೆಯನ್ನೂ ಮಾಡಿರುತ್ತಾರೆ. ಸಮಿತಿ ಸದಸ್ಯರುಗಳೆಲ್ಲಾ ತಪ್ಪದೆ ದಯಮಾಡಿಸಬೇಕು.—ಎಂದು ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಅರಮನೆ ಸುದ್ದಿ

(ಬೆಂಗಳೂರು, ಮಂಗಳವಾರ 20 ನೇ ನವೆಂಬರ್ 1946)

ಶ್ರೀಮನ್ಮಹಾರಾಜರವರು ಈ ದಿವಸ ಈ ಕೆಳಗೆ ಕಂಡವರಿಗೆ ಭೇಟಿ ದಯಪಾಲಿಸಿದರು.—

ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ಮಿ || ಜಿ. ಸುಂದರರಾಯರು

ಚೀಫ್ ಸ್ಕೌಟ್ ಕಮಿಷನರು ಮೇಜರ್ ವೈ. ವಿ. ಕೆ. ಮೂರ್ತಿ,

ಟ್ರೂಥ್ ಪತ್ರಿಕೆಯ ಮಾಜಿ ಸಂಪಾದಕರು ಶ್ರೀ ಕೆ. ನಾರಾಯಣಸ್ವಾಮಿಐಯರ್

ರಿ || ಸೀನಿಯರ್ ಸರ್ಜನ್ ಶಸ್ತ್ರವೈದ್ಯಪ್ರವೀಣ ಡಾ || ಎಸ್. ಸುಬ್ಬರಾಯರು

ಡಿ||ಡಿ||ಪಿ||ಐ|| (ಪಾ|| ವಿದ್ಯಾಭ್ಯಾಸ) ಶ್ರೀ ಎಂ.ಎಸ್.ರಾಜಗೋಪಾಲರಾಯರು

ಮೈಸೂರು ಚೇಂಬರ್ ಆಫ್ ಕಾಮರ್ಸಿನ ಸೆಕ್ರೆಟರಿ ಶ್ರೀ ಕೆ. ಶಾಮಯ್ಯರು

ಚಿಕ್ಕಬಳ್ಳಾಪುರದ ವರ್ತಕರು ಮತ್ತು ಡಿಸ್ಟ್ರಿಕ್ಟ್ ಬೋರ್ಡು ಮಾಜಿ ಅಧ್ಯಕ್ಷ
ಶ್ರೀ ಕೆ. ವೆಂಕಟಸಾಮಿಶೆಟ್ಟರು

ಬೆಂಗಳೂರು ' ಮಾಣಿಕ್ಯವೇಲು ಮ್ಯಾನ್ಷನ್ ' ನ್ಹಿನ ಶ್ರೀ ಸುಂದರ ಮೂರ್ತಿ
ಮೊದಲಯಾದವರು

ಎಸ್. ಐ. ರೈಲ್ವೆ ಮಾಜಿ ಚೀಫ್ ಟ್ರಾನ್ಸ್‌ಪೋರ್ಟ್ ಸೂಪರಿಂಟೆಂಡೆಂಟರು
ಶ್ರೀ ಎಸ್. ಪೂರ್ಣಯ್ಯನವರು

ಶ್ರೀನಿವಾಸಪುರದ ಆಂ. ಎ. ಮತ್ತು ಕೋಲಾರ ಡಿಸ್ಟ್ರಿಕ್ಟ್ ಬೋರ್ಡು ಮೆಂಬರು
ಶ್ರೀ ಎಸ್. ರಾಮಪ್ಪನವರು

ಆರ್ಮಿ ಮತ್ತು ಇಂಜನೀರಿಂಗು ಕಂಟ್ರಾಕ್ಟರು ಶ್ರೀ ಎಸ್. ವೆಂಕಟಪ್ಪನವರು

ಕಡೂರು ಡಿಸ್ಟ್ರಿಕ್ಟ್ ಕಾಫೀಪ್ಲಾಂಟರು ಶ್ರೀ ಟಿ. ಬಿ. ಮಲ್ಲೀಗೌಡರು

ನಿವೃತ್ತ ನ್ಯಾಯಾಂಗ ಸಚಿವರು ರಾಜಮಂತ್ರಪ್ರವೀಣ ಎ. ವಿ. ರಾಮನಾಥನ್‌ರು

Talk-a-Tone

Premier Film Mag. of S. India
Local Agent— D. Mahaadev
c/o Opera Talkies,,Myso

ಸತ್ಯವಾದಿ

ದಿನ ಪತ್ರಿಕೆ. ಶಿಂಗಳೀಗೆ ಆರಾಣೆ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12--0

Edited, Printed and Published by M. S Krishna Rao at the Satyavadi Press Chamaraj Agra ahr Mysore.

At Opera

5th Houseful Week

Sri Murugan

ಶ್ರೀ ಮುರುಗನ್

ಹೊನ್ನಪ್ಪ ಭಾಗವತರ್, ಕಾಳಿ ಎಕ್ ರತ್ನ, ಮಾಲತಿ, ಚೀವರತ್ನ, ಯೋಗ ಮಂಗಳಂ ಮುಂತಾದವರು

ಪಾತ್ರವಹಿಸಿರುವರು (ತಮಿಳು ಚಿತ್ರ)

At Ranjit **From 15-11-46**

ಸೂರಿಯಾ - ಪಹರಿ ಸನ್ಯಾಲ್ - ಷಾ ನವಾಜ್

ಪಾತ್ರವಹಿಸಿರುವ

ಮೈಕ್ಯಾಕ ರೂಂ

Mai Kya Karam

ಪ್ರತಿ ದಿನ 3 ಆಟಗಳು .... ಅಮೋಘ ಹಿಂದಿ ಚಿತ್ರ

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘಸವಾದ ಗುಣವುಳ್ಳದ್ದು. ಎಲ್ಲಾ ಸನ್ನಾಹಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪೌಂಡು ಪ್ಯಾಕ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ೧-೮-೦ ಮಾತ್ರ.

ನಮ್ಮ ಸುಪ್ತಂದ ಅಡಿಕೆಪುಡಿ ಒಂದು ವೈಶಿಷ್ಟ್ಯ

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವಂಗಳಿಗೆ ಮತ್ತು ಸ್ಯಾಂಪಲ್‌ಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಬಿ. ಟಿ. ಮಜರಾಸ್ತಾ.